ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 646/2012

ಪ್ರಾಸಾ : 14
ಚಾಸಾ : 22

| | | |
|---|---|---|
| ಹೆಸರು | : | ಧರ್ಮಪಾಲ |
| ತಂದೆಯ ಹೆಸರು | : | ತನಿಯಪ್ಪ ನಾಯ್ಕ |
| ಪ್ರಾಯ | : | 48 ವರ್ಷ |
| ಉದ್ಯೋಗ | : | ಹೆಚ್ ಸಿ -2271 , ಧರ್ಮಸ್ಥಳ |
| ವಾಸಸ್ಥಳ | : | ಧರ್ಮಸ್ಥಳ |

ದಿನಾಂಕಃ 21.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು **2011** ರಿಂದ ಮಾರ್ಚ **2016** ವರೆಗೆ ಬಂಟ್ವಾಳ ನಗರ ಪೊಲೀಸು ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಸಿ ಪಿ ಐ ರವರ ಆದೇಶದ ಮೆರೆಗೆ ದಿಃ 24.12.2011 ರಂದು ಆರೋಪಿ ಹಾಗೂ ಸ್ವತ್ತು ಪತ್ತೆ ಬಗ್ಗೆ ಚಾಸಾ-21 ಮತ್ತು ನಾನು ನೇಮಕಗೊಂಡಿದ್ದು, ಮೇಲ್ಕಾರ್, ಬೆಂಕ್ಯ, ಕೊಳಕೆ ಪರಿಸರಗಳಲ್ಲಿ ಸಂಚರಿಸಿಕೊಂಡು, ಚಾಸಾ-2 ರವರ ಮನೆಗೆ ಹೋಗಿ ಅವರನ್ನು ವಿಚಾರಿಸಿಕೊಂಡು ಅವರನ್ನು ಕರೆದುಕೊಂಡು ಅವರ ತೋರಿಸಿಕೊಟ್ಟಂತೆ ತಕ್ಷಿರು ಸ್ಥಳವಾದ ಬಂಟ್ವಾಳ ತಾಲೂಕು ಸಜೀಪಮೂಡ ಗ್ರಾಮದ ಕೊಳಕೆ ಪೆರುವಾಯಿ ಎಂಬಲ್ಲಿಗೆ ಬೇಟಿ ಕೊಟ್ಟು ಆಸುಪಾಸಿನಲ್ಲಿ

ಹುಡುಕಲಾಗಿ ಅಲ್ಲೇ ಬಿದ್ದಿದ್ದ ಚಾಸಾ-1 ರವರ ತುಂಡಾದ ಒಂದು ಎಳೆಯ ಚಿನ್ನದ ಕರಿಮಣಿ ಸರ ಮತ್ತು ಕತ್ತಿನ ಸರವನ್ನು ಚಾಸಾ-21 ರವರು ವಶಕ್ಕೆ ಪಡೆದುಕೊಂಡು ವೃತ್ತ ಕಚೇರಿಗೆ ಅದೇ ದಿನ ಸಂಜೆ ಸುಮಾರು 4.00 ಗಂಟೆಗೆ ತನಿಖಾಧಿಕಾರಿಯಾದ ಚಾಸಾ-29 ರವರ ಮುಂದೆ ಹಾಜರುಪಡಿಸಲಾಯಿತು. ಸದರಿ ಸ್ವತ್ತಿನ ಮೇಲೆ ತನಿಖಾಧಿಕಾರಿಯವರು ಚಾಸಾ-1,2,6 ಮತ್ತು 7 ರವರ ಸಮಕ್ಷಮ ಸಂಜೆ 4.00 ಗಂಟೆಯಿಂದ 5.00 ಗಂಟೆ ವರೆಗೆ ಸ್ವತ್ತು ಸ್ವಾದೀನತಾ ಮಹಜರನ್ನು ಕಚೇರಿಯಲ್ಲಿ ಜರುಗಿಸಿರುತ್ತಾರೆ. ಅದು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3(೩) ಎಂದು ಗುರುತಿಸಲಾಯಿತು. ನಿಪಿ-4 ರ ಪೋಟೋದಲ್ಲಿ ಕಾಣುವ ಕರಿಮಣಿ ಮತ್ತು ಸರವನ್ನು ಸಾಕ್ಷಿ ನೋಡಿ ಗುರುತಿಸಿದರು.

( ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಎಸ್ ಪಿ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ. ಮಾನ್ಯ ಎಪಿಪಿ ರವರು ಕಾಲಾವಕಾಶ ನೀಡಲು ತಕಾರಾರು ಸಲ್ಲಿಸಿರುತ್ತಾರೆ. ನ್ಯಾಯದ ಹಿತ ದೃಷ್ಟಿಯಿಂದ ಪಾಟಿ ಸವಾಲಿಗೆ ಮುಂದುಡಲಾಯಿತು.)

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ